ಎಂಬ ಗ್ರಾಮದಲ್ಲಿ ಹುಟ್ಟಿ ಬೆಳೆದಿದ್ದವನು. ಅವನು ಹೇಗೋ ನಗರಕ್ಕೆ ಬಂದು ಒಕ್ಕಲಿಗರ ಸಂಘದ ಫ್ರೀ ಹಾಸ್ಟೆಲ್ ಸೇರಿಕೊಂಡು ಕಾಲೇಜು ಓದಿ, ನಂತರದಲ್ಲಿ ಎಂ.ಎ ಅನ್ನು ಪಾಸು ಮಾಡಿಕೊಂಡು ಉಪನ್ಯಾಸಕ ಕೆಲಸ ಗಿಟ್ಟಿಸಿಕೊಂಡಿದ್ದ.

ಅವನಿಗಿದ್ದ ಇಬ್ಬರು ತಂಗಿಯರ ಮದುವೆಯಾಗಿ ತಾಯಿ ಪುಟ್ಟಮ್ಮ ಒಬ್ಬರೇ ಗೊಚ್ಚೆಗುಂಡಿಯ ಮನೆಯಲ್ಲಿ ಉಳಿದುಬಿಟ್ಟಿದ್ದರು. ಹುಚ್ಚೇಗೌಡ ಅವರನ್ನು ನಗರಕ್ಕೆ ಕರೆತರಲು ಪ್ರಯತ್ನಿಸಿ ವಿಫಲನಾಗಿದ್ದ. ಮುದುಕಿ ಪುಟ್ಟಮ್ಮನಿಗೆ ತಾನು ಬದುಕು ನಡೆಸಿದ ಊರನ್ನು ಬಿಟ್ಟು ಬರುವ ಮನಸ್ಸಿರಲಿಲ್ಲ.

ಹುಚ್ಚೇಗೌಡನಿಗೂ ದೂರದ ಹಳ್ಳಿಗೆ ಹೋಗಿ ಬಂದು ವ್ಯವಸಾಯದ ಕೆಲಸ ನೋಡಿಕೊಳ್ಳುವ ಅನುಕೂಲವಿರಲಿಲ್ಲ. ಇದ್ದ ಪಿತ್ರಾರ್ಜಿತ ಜಮೀನಿನಲ್ಲಿ ಎರಡೆಕರೆ ಗದ್ದೆಯನ್ನು ಊರವರಿಗೆ ಗುತ್ತಿಗೆಗೆ ಕೊಟ್ಟು ತಾಯಿಯ ಜೀವನಾಂಶಕ್ಕೆ ದಾರಿ ಮಾಡಿಕೊಟ್ಟಿದ್ದ. ಇನ್ನು ಮಿಕ್ಕ ನಾಲ್ಕೆಕರೆ ತೋಟ ಮಾರಿ ನಗರದ ವಿದ್ಯಾನಗರ ಬಡಾವಣೆಯಲ್ಲಿ ಸೈಟ್ ಕೊಂಡು, ಬ್ಯಾಂಕ್ ಲೋನ್ ತೆಗೆದು ಒಳ್ಳೆಯ ಮನೆ ಮಾಡಿಕೊಂಡಿದ್ದ. ವಿಶಾಲವಾದ ಮೂರು ಬೆಡ್ ರೂಮಿನ ಮನೆ ಅದು. ಹೊರಗಡೆಯಿಂದ ಸ್ಟೇರ್ ಕೇಸ್ ಹಾಕಿಸಿ ಟೆರೇಸ್ ಮೇಲೊಂದು ವಿಶಾಲವಾದ ರೂಮ್ ಕಟ್ಟಿಸಿದ್ದ. ಯಾರಾದರೂ ಒಳ್ಳೆಯ ಜನ ಬಂದರೆ ಅದನ್ನು ಬಾಡಿಗೆಗೆ ಕೊಡುವ ಇರಾದೆ ಅವನದಾಗಿತ್ತು.

ಕಾಲಕ್ರಮದಲ್ಲಿ ಅವನ ಒಬ್ಬಳೇ ಮಗಳು ದಾಕ್ಷಾಯಿಣಿ ಇಂಜಿನಿಯರಿಂಗ್ ಮುಗಿಸಿ ಅದೇ ನಗರದ ನಗರಸಭೆಯಲ್ಲಿ ಇಂಜಿನಿಯರ್ ಆಗಿ ಕೆಲಸಕ್ಕೆ ಸೇರಿಕೊಂಡಿದ್ದಳು. ಕೆಎಎಸ್ ಅಧಿಕಾರಿಯಾಗಿದ್ದ ಅವಳ ಗಂಡ ಬೆಂಗಳೂರಿನ ವಿಧಾನಸೌಧದಲ್ಲಿ ಕೆಲಸ ಮಾಡುತ್ತಿದ್ದ. ಅವನು ವಾರಕ್ಕೊಮ್ಮೆ ಬಂದು ಇದ್ದು ಹೋಗುತ್ತಿದ್ದ.

ಪಕ್ಕದ ಬಡಾವಣೆಯಲ್ಲಿ ಅವರಿಗೂ ಒಂದು ವಿಶಾಲವಾದ ಸ್ವಂತ ಮನೆಯಿತ್ತು. ಅದರಲ್ಲಿ ದಾಕ್ಷಾಯಿಣಿ ಹಾಗೂ ಮಾಧ್ಯಮಿಕ ಶಾಲೆಯಲ್ಲಿ ಓದುವ ಮಗ ಸಾತ್ವಿಕ್ ಇಬ್ಬರೇ. ದಾಕ್ಷಾಯಿಣಿ ಆಫೀಸ್ ಮುಗಿಸಿ ಬರುವವರೆಗೂ ಮಗ ಒಬ್ಬನೇ ಸಪ್ಪಗೆ ಕೂತಿರುತ್ತಿದ್ದ. ಅದೇಕೋ ದಾಕ್ಷಾಯಿಣಿಗೆ ಸರಿ ಬರುತ್ತಿಲ್ಲವೆನಿಸಿತು.

ಅಪ್ಪ ಹಾಗೂ ಗಂಡನೊಂದಿಗೆ ಸಮಾಲೋಚಿಸಿ ಆ ಮನೆ ಬಾಡಿಗೆಗೆ ಕೊಟ್ಟು ವಿದ್ಯಾನಗರಕ್ಕೆ ಬಂದು ಅಪ್ಪನ ಮನೆಯ ಟೆರೇಸ್ ರೂಮಿನಲ್ಲಿ ವಾಸ ಹಾಕಿದ್ದಳು. ಮಗನಿಗೆ ಅಜ್ಜ, ಅಜ್ಜಿಯರು ನೆರವಿಗಿದ್ದುದರಿಂದ ಅವಳು ನೆಮ್ಮದಿಯಿಂದ ಆಫೀಸಿಗೆ ಹೋಗಿ ಬರುತ್ತಿದ್ದಳು.

ಆ ಮಧ್ಯೆ ಗೊಚ್ಚೆಗುಂಡಿಯಲ್ಲಿದ್ದ ತೊಂಬತ್ತರ ವಯೋಮಾನದ ಅಜ್ಜಿ ಪುಟ್ಟಮ್ಮನನ್ನು ಒಬ್ಬಳನ್ನೇ ಬಿಡುವುದು ಸರಿಯಿಲ್ಲವೆನಿಸಿ, ಅಜ್ಜಿಯ ಮಗಳು ಅಳಿಯಂದಿರು ಬಲವಂತವಾಗಿ ಅಲ್ಲಿಂದ ಹೊರಡಿಸಿ ಜೀಪಿನಲ್ಲಿ ತಂದು ವಿದ್ಯಾನಗರದ ಮನೆಗೆ ಬಿಟ್ಟುಹೋಗಿದ್ದರು.

ಮಲೆನಾಡಿನ ಹಸಿರು ಪರಿಸರದಲ್ಲಿ ಬದುಕು ನಡೆಸುತ್ತಿದ್ದ ಅಜ್ಜಿ ಪುಟ್ಟಮ್ಮನಿಗೆ ಎತ್ತ ನೋಡಿದರೂ ಬರೀ ಕಾಂಕ್ರೀಟ್ ಮನೆಗಳೇ ಕಾಣುವ ನಗರ ಹಿಡಿಸಲಿಲ್ಲ. ಸೊಸೆ ಬೆಳಗ್ಗೆ, ಸಂಜೆ ವಾಕ್ ಮುಗಿಸಿ, ದಿನದ ಅಡುಗೆ ಮಾಡಿಟ್ಟು ಟಿ.ವಿ ನೋಡಲು ಕೂರುತ್ತಿದ್ದಳು. ಹಾಗಾಗಿ, ಮಾತಿಗೆ ಯಾರೂ ಸಿಕ್ಕದೆ ಅಜ್ಜಿ ಒಂದೇ ಚಡಪಡಿಸುತ್ತಾ ಸದಾ ಮುಂದಿನ ಬಾಗಿಲು ತೆರೆದುಕೊಂಡು ರಸ್ತೆಯಲ್ಲಿ ಹೋಗಿ ಬರುವವರನ್ನು ನೋಡುತ್ತಾ ಕುಳಿತುಕೊಳ್ಳುತ್ತಿತ್ತು.

ಕಡುಕಪ್ಪು ತುಂಬುತೋಳಿನ ರವಿಕೆ ತೊಟ್ಟು, ಕುತ್ತಿಗೆಯವರೆಗೂ ಗುಂಡಿ ಹಾಕಿಕೊಂಡು, ಚೌಕಳಿ ಸೀರೆಯ ಸೆರಗನ್ನು ಬೆನ್ನ ಮೇಲಿಂದ ತಂದು ಮುಂದೆ ಎದೆಯಭಾಗದಲ್ಲಿ 'ಗೌಂಟಗೆ' ಕಟ್ಟಿಕೊಂಡು, ಮೇಲೊಂದು ಗುಂಡಿನ ಸರ ಹಾಕಿಕೊಂಡು ರವಿಕೆಯ ಬಲಭಾಗದ ಕೋರೆಜೋಬಿನಿಂದ ನಶ್ಯ ಡಬ್ಬಿ ತೆಗೆದು ಮೂಗು ತುಂಬಾ ನಶ್ಯ ತುಂಬಿಕೊಳ್ಳುತ್ತಾ ಕೂತಿರುತ್ತಿತ್ತು.

ಅಪ್ಪಟ ಮಲೆನಾಡಿನ ವಿಶಿಷ್ಟ ಉಡುಗೆಯ ಮುದುಕಿಯನ್ನು, ಸೀರೆಯನ್ನೇ ಮರೆತುಬಿಟ್ಟಂತಿರುವ, ಯಾವಾಗಲೂ ಚೂಡಿದಾರವೋ, ನೈಟಿಯೋ ಧರಿಸಿ ತಿರುಗಾಡುವ ಸ್ಥಳೀಯ ಹೆಂಗಸರು ಕೌತುಕದಿಂದ ಗಮನಿಸುತ್ತಿದ್ದರು.